ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆ: 194/2023

ಪಿ ಡಬ್ಲ್ಯೂ: 1

ಸಿ ಡಬ್ಲ್ಯೂ: 3

| | | |
|---|---|---|
| ಸಾಕ್ಷಿಯ ಹೆಸರು | : | ಯಲ್ಲಪ್ಪರೆಡ್ಡಿ |
| ತಂದೆಯ ಹೆಸರು | : | ಸೋಮರೆಡ್ಡಿ |
| ವಯಸ್ಸು | : | 38 |
| ಉದ್ಯೋಗ | : | ಅಬಕಾರಿ ಮುಖ್ಯ ಪೇದೆ |
| ವಾಸಸ್ಥಳ | : | ಶಿಗ್ಗಾಂವ |

ದಿನಾಂಕ: 07-10-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:</u>

ಜುಲೈ ದಿ: 11-09-2015 ರಿಂದ 06-02-2024 ರ ವರೆಗೆ ಅಬಕಾರಿ ಪೋಲಿಸ್ ಠಾಣೆಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19-04-2023 ರಂದು ರಾತ್ರಿ 7.30 ರ ಸುಮಾರಿಗೆ ರಾಣೇಬೆನ್ನೂರು ತಾಲೂಕಿನ ದೇವರಗುಡ್ಡ ಗ್ರಾಮದಲ್ಲಿ ಚಾ ಸಾ -1 ರವರು ಸರ್ಕಾರಿ ವಾಹನ ಸಂಖ್ಯೆ ಕೆಎ-27/ಜಿ-362 ರಲ್ಲಿ ಗಸ್ತು ಮಾಡುತ್ತಿರುವಾಗ ಅಬಕಾರಿ ಉಪನೀರಿಕ್ಷಕರಿಗೆ ಸದರಿ ಗ್ರಾಮದಲ್ಲಿರುವ ಆರೋಪಿಯು ಅಕ್ರಮವಾಗಿ ಬೀಡಾ ಅಂಗಡಿಯಲ್ಲಿ ಮದ್ಯ ಸಂಗ್ರಹಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ವಾಹನದಲ್ಲಿರುವ ನಮಗೆ ತಿಳಿಸಿದರು. ನಂತರ 7.40 ಗಂಟೆ ಸುಮಾರಿಗೆ ದೇವರಗುಡ್ಡ ಬಸ್ ನಿಲ್ದಾಣದ ಹತ್ತಿರ ನಮ್ಮ ವಾಹನವನ್ನು ನಿಲ್ಲಿಸಿ ಅಲ್ಲಿ ನಿಂತಿದ್ದ ಒಬ್ಬ ವ್ಯಕ್ತಿಯನ್ನು ಕರೆದು ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೇಳಿದ ಮೇರೆಗೆ ಚಾಸಾ 2 ರವರು ಪಂಚರಾಗಲು ಒಪ್ಪಿದ ಮೇರೆಗೆ ಚಾಸಾ 1 ರವರು ಅಲ್ಲಿಯೇ ಸರ್ಚ ವಾರಂಟ್ ತಯಾರಿಸಿಕೊಂಡು ಪಂಚರನ್ನು ವಾಹನದಲ್ಲಿ ಕುಡಿಸಿಕೊಂಡು ಬಾತ್ಮಿ ಬಂದ ಬೀಡಾ ಅಂಗಡಿ ಹತ್ತಿರ ವಾಹನವನ್ನು ನಿಲ್ಲಿಸಿ ಹೊರಗಡೆಯಿಂದ ಅಂಗಡಿಯ ಒಳಗಡೆ ನೋಡಿ ಯಾರು ಕಾಣದ ಕಾರಣ ಅಂಗಡಿಯ ಹೊರಗಡೆ ನಿಂತಿದ್ದ ವ್ಯಕ್ತಿಗಳಿಗೆ ಬಾತ್ಮಿ ವಿಷಯ ತಿಳಿಸಿ ಆರೋಪಿಯ ಬಗ್ಗೆ ವಿಚಾರಿಸಿದಾಗ ಅವರು ಹೊರಗಡೆ ಹೋಗಿರುವ ಬಗ್ಗೆ ತಿಳಿಸಿದರು. ನಂತರ ಪಂಚರ ಸಮಕ್ಷಮ ಬೀಡಾ ಅಂಗಡಿಯನ್ನು ಶೋಧಿಸಲಾಗಿ ಕೌಂಟರ್ ಕೆಳಗಡೆ ಒಂದು ಕೆಂಪು ಚೀಲ ಕಂಡು ಬಂದಿತು. ಸದರಿ ಚೀಲವನ್ನು ಶೋಧಿಸಿದಾಗ 90 ಮಿಲಿಯ 30 ಓ ಸಿ ಮದ್ಯದ ಟೆಟ್ರಾ ಪ್ಯಾಕ ಗಳು ಮತ್ತು 180 ಮಿಲಿಯ 12 ಬ್ಯಾಗ್ ಪೇಪರ್ ಮದ್ಯದ ಟೆಟ್ರಾ ಪ್ಯಾಕ

ಗಳು ಇರುವುದು ಕಂಡು ಬಂದಿತು. ಚಾಸಾ 1 ರವರು ಸದರಿ ವಸ್ತುಗಳನ್ನು ವಶಪಡಿಸಿಕೊಂಡು ಸದರಿ ವಸ್ತುಗಳನ್ನು ಪರವಾನಿಗೆ ಇಲ್ಲದೆ ಮಾರಾಟ ಮಾಡಿರುವುದು ಕಾನೂನು ಉಲ್ಲಂಘನೆ ಎಂದು ತಿಳಿಸಿ ಸದರಿ ಆರೋಪಿಯು ತಲೆ ಮರೆಸಿಕೊಂಡಿದ್ದು ಪತ್ತೆ ಹಚ್ಚಬೇಕಾಗಿ ತಿಳಿಸಿ ಎಲ್ಲಾ ಮು ಮಾ ಗಳನ್ನು ಅದೇ ಚೀಲದಲ್ಲಿ ಹಾಕಿ ಸೀಲ್ ಮಾಡಿ ನಂತರ ಘಟನಾ ಸ್ಥಳದಲ್ಲಿ 7.45 ರಿಂದ 8.45 ರ ವೆರೆಗೆ ಪಂಚನಾಮೆ ಜರುಗಿಸಿ ಪಂಚನಾಮೆಯನ್ನು ಪಂಚರು ಹೇಳಿದಂತೆ ನಾನೇ ಬರೆದು ಸಹಿ ಮಾಡಿದೆನು. ದಿ: 17-05-2023 ರಂದು ಚಾಸಾ 5 ರವರು ಮು ಮಾ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದರು. ನಂತರ ದಿ: 02-06-2023 ರಂದು ಸದರಿ ಪರೀಕ್ಷೆಯ ವರದಿಯನ್ನು ತೆಗೆದುಕೊಂಡು ಬಂದು ಅದೇ ದಿನ ಹೇಳಿಕೆ ನೀಡಿರುತ್ತೇನೆ.

ಸ್ಥಳ ಪಂಚನಾಮೆಯನ್ನು ನಿಪಿ-1 ಎಂದು ಮತ್ತು ಸಹಿಯನ್ನು ನಿಪಿ-1 ಎ ಎಂದು, ಒಟ್ಟು 42 ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಯಿತು.

**ಆರೋಪಿಯು ಗೈರು ಹಾಜರಾಗಿದ್ದು, ಅವರನ್ನು ನೋಡಿದರೆ ಗುರುತಿಸುವುದಾಗಿ ತಿಳಿಸಿದ್ದು ಗೈರು ಹಾಜರಾತಿಯಲ್ಲಿ ಗುರುತಿಸಲು ಆರೋಪಿ ಪರ ವಕೀಲರ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.**

**<u>ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:</u>**

ಕಛೇರಿಯಿಂದ ನೇರವಾಗಿ ದೇವರಗುಡ್ಡಕ್ಕೆ ಬಂದಿರುತ್ತೇವೆ. ಆರೋಪಿಯ ಬೀಡಾ ಅಂಗಡಿಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ. ಬೀಡಾ ಅಂಗಡಿ ತಗಡಿನ ಶೆಡ್ ಆಗಿರುತ್ತದೆ. ಬೀಡಗ ಅಂಗಡಿ ಪೂರ್ವಕ್ಕೆ ಪಂಚಾಯತಿ ರಸ್ತೆ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರ ಮತ್ತು ದಕ್ಷಿಣಕ್ಕೆ ಖಾಲಿ ಜಾಗ ಇರುತ್ತದೆ. ಬೀಡಾ ಅಂಗಡಿಯ ಒಳಗಡೆ ಮೊದಲು ಚಾಸಾ 1 ರವರು ಹೋಗಿರುತ್ತಾರೆ. ಮದ್ಯದ ಟೆಟ್ರಾ ಪ್ಯಾಕ್ ನ ಲೇಬಲ್ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ಒಟ್ಟು ಅಂದಾಜು 4 ಲೀ. ಮದ್ಯ ಇತ್ತು. ನಾನು ಯಾವುದೇ ಪಂಚನಾಮೆಯನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅಕ್ರಮವಾಗಿ ಯಾವುದೇ ಮದ್ಯ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ಪಂಚನಾಮೆಯನ್ನು ತಯಾರು ಮಾಡಿರುತ್ತೀರಾ ಎಂದರೆ ಸರಿಯಲ್ಲ. ಚಾ ಸಾ 1 ರವರು ನನ್ನ ಮೇಲಾಧಿಕಾರಿಯಾಗಿರುವುದರಿಂದ ಅವರ ಮಾತು ಕೇಳಿ ಸದರಿ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದರೆ ಸರಿಯಲ್ಲ. ರಾಸಾಯನಿಕ ಪರಿಕ್ಷೆಗಾಗಿ ಮು ಮಾ ಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೊಪಿಯನ್ನು ಪ್ರಕರಣದಲ್ಲಿ ತರುವ ಸಲುವಾಗಿ ಈ ಘಟನೆಯನ್ನು ಸೃಷ್ಟಿಮಾಡಿ

ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿಗೂ ಮು.ಮಾಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾ.ದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ/-

ಓ ಹೇ ಕೆ ಸರಿ ಇದೆ.

C/c. ಪ್ರಧಾನ ದಿವಾಣಿ ನ್ಯಾಯಾಧೀಶರು ವ 1 ನೇ
ಹೆಚ್ಚುವರಿ ಜೆಎಂಎಫ್‌ಸಿ., ರಾಣೇಬೆನ್ನೂರು.